
## ಕವಿತೆ



ಬಿದಲೋಟಿ ರಂಗನಾಥ್
ಕಲೆ: ರೂಪಶ್ರೀ ಕಲ್ಲಿಗನೂರು



# ಹೆಗಲ ಮೇಲೊಂದು ಮಚ್ಚು ಇದೆ

ಹೆಗಲ ಮೇಲೊಂದು ಮಚ್ಚು ಇದೆ
ಯಾರೋ ಮಸೆದಿಟ್ಟಿದ್ದು
ಬಾಯಿ ಹೊಳೆವ ಚಂದಿರ
ಗಾತ್ರ ತೆಳ್ಳನೆಯ ಉಕ್ಕಿನ ಮೈ

ಯಾರನ್ನೂ ಕತ್ತರಿಸುವುದಿಲ್ಲ
ಕಣ್ಣು ಕಾಲು ಕೈ ಮಿಗಿಲಾಗಿ
ಮನಸೂ ಇದೆ
ಮಾತಾಡುತ್ತದೆ ಪ್ರೀತಿ ಹೆತ್ತವವರ ಒಡಲ ಜೊತೆ
ನಡೆವ ದಾರಿಯುದ್ದಕ್ಕೂ ಹೂ ಹಾಸಿದ್ದರೆ ಮಾತ್ರ

ಮಸೆದಿಟ್ಟವನ ಕೈ ತುಂಬ ಮುಳ್ಳಿರಬಹುದೇನೋ
ಇದು ತುಂಬಾ ಮೃದು
ಒಂದೊಂದು ಸಾರಿ ನಗುತ್ತದೆ ಅಳುತ್ತದೆ
ಚಿಂತೆ ಹೊಕ್ಕಿದವನಂತೆ ಕೂತುಬಿಡುತ್ತದೆ
ಕವಿತೆ ಬಂದು ಮುಂದೆ ನಿಂತರೆ
ಕೈಕಟ್ಟಿ ನಿಂತು ಬಿಡುತ್ತದೆ

ಅವತ್ತೆಂದೋ ಆಕಸ್ಮಿಕವಾಗಿ
ಈ ಮಚ್ಚಿನಿಂದ ಕತ್ತರಿಸಿದ ಗಿಡ
ಇಂದು ಮರವಾಗಿ ಹೂ ಬಿಟ್ಟಿದೆ
ಕಾಯಿ ಹಣ್ಣು ತೂಗಿದೆ
ನೆರಳಿಲ್ಲದವರಿಗೂ ನೆರಳ ದಯಪಾಲಿಸಿದೆ

ಈ ಮಚ್ಚು ಎಂದೂ ಮಾಂಸ ಕತ್ತರಿಸಿದ್ದಲ್ಲ
ಉರುಳಿ ಬೀಳುವ ಗುಡಿಸಲ ಬಾಯಿಗೆ
ಅನ್ನವಾಗಿದ್ದೇ ಹೆಚ್ಚು
ಹರಿದುಹೋದ ಬಟ್ಟೆಗೆ ನೂಲಾಗಿದೆ
ಹೆದರಿದ ದಾರಿಗೆ ಧೈರ್ಯ ತುಂಬಿದೆ

ನೀವೂ ಮುಟ್ಟಿ
ಭಾವದ ಗೂಡಿಗೆ ಮಲ್ಲಿಗೆ ತುಂಬಬಹುದು
ಮಗುವಿನ ಮನಸನು ಹೊತ್ತು
ಕಾಡು ಕಣಿವೆ ಹಳ್ಳ ಕೊಳ್ಳ ದಾಟಬಹುದು
ನದಿ ಸಮುದ್ರದಲ್ಲೂ ಬೊಗಸೆ ನೀರನು ಕುಡಿದು
ದಣಿವಾರಿಸಿಕೊಳ್ಳಬಹುದು

ಕೆಕ್ಕರಿಸಿ ನೋಡುವವರೂ ಗೆಳೆಯರಾಗುತ್ತಾರೆ
ವಕ್ಕರಿಸಿ ಬಂದವರು
ಕೊರಳ ಹಾರವಾಗುತ್ತಾರೆ
ಕತ್ತಲಾಗಿಸುವವರು ದೀಪ ಹಚ್ಚುತ್ತಾರೆ

